STD

# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | 1000 |
| **ಸದಸ್ಯರ ಹೆಸರು** | ಶ್ರೀ ಶಶೀಲ್ ಜಿ.ನಮೋಶಿ ( ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| **ವಿಷಯ** | ವಿಧವೆಯರು, ಲೈಂಗಿಕ ಅಲ್ಪಸಂಖ್ಯಾತರು, ಹಿರಿಯ ನಾಗರೀಕರು ಹಾಗೂ ವಿಕಲಚೇತನರಿಗೆ ನೀಡುವ ಮಾಸಾಶನದ ಕುರಿತು |
| **ಉತ್ತರಿಸಬೇಕಾದ ದಿನಾಂಕ** | 27.12.2022 |
| **ಉತ್ತರಿಸುವ ಸಚಿವರು** | ಕಂದಾಯ ಸಚಿವರು |
| **ಪ್ರಶ್ನೆ** | ಉತ್ತರ |
| ಅ) ರಾಜ್ಯದಲ್ಲಿರುವ ವಿಧವೆಯರು, ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಹಿರಿಯ ನಾಗರೀಕರು ಮತ್ತು ವಿಕಲಚೇನರಿಗೆ ಸರ್ಕಾರದಿಂದ ನೀಡುವ ಮಾಶಾಸನ ಎಷ್ಟು; ಇವುಗಳನ್ನು ಪಡೆಯಲು ಇರುವ ಮಾನದಂಡಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿರುವ ವಿಧವೆಯರು, ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಹಿರಿಯ ನಾಗರೀಕರು ಮತ್ತು ವಿಕಲಚೇತನರಿಗೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಯಡಿ ಈ ಕೆಳಕಂಡಂತೆ ಮಾಸಿಕ ಪಿಂಚಣಿಯನ್ನು ಒದಗಿಸಲಾಗುತ್ತಿದೆ. |

| ಕ್ರ.ಸಂ | ಯೋಜನೆ | ಮಾಸಿಕ ಪಿಂಚಣಿ (ರೂ) |
|---|---|---|
| 1 | ವಿಧವಾ ವೇತನ | 800 |
| 2 | ಮೈತ್ರಿ ಯೋಜನೆ (ಲೈಂಗಿಕ ಅಲ್ಪಸಂಖ್ಯಾತರು) | 800 |
| 3 | ವೃದ್ಧಾಪ್ಯ ವೇತನ<br>• 60-64 ವರ್ಷ<br>• 65 ವರ್ಷ ಮೇಲ್ಪಟವರಿಗೆ | <br>600<br>1200 |
| 4 | ಅಂಗವಿಕಲ ವೇತನ<br>• ಶೇ 40 ರಿಂದ ಶೇ 74 ಅಂಗವಿಕಲತೆ<br>• ಶೇ 75 ಹಾಗೂ ಹೆಚ್ಚಿನ ಅಂಗವಿಕಲತೆ<br>• ಶೇ 75 ಹಾಗೂ ಹೆಚ್ಚಿನ ಮನೋವೈಕಲ್ಯತೆ | 800<br>1400<br>2000 |

**ಯೋಜನೆಗಳ ಮಾನದಂಡಗಳು:**

1. **ವಿಧವಾ ವೇತನ:**

- 18 ವರ್ಷ ಮೇಲ್ಪಟ್ಟ ವಿಧವೆಯರು
- ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/-ಗಳಿಗಿಂತ ಕಡಿಮೆ ಇರಬೇಕು.

| | |
|---|---|
| | **2. <u>ಮೈತ್ರಿ ಯೋಜನೆ:</u>**<br>• 25 ರಿಂದ 64 ವರ್ಷ ವಯಸ್ಸಿನೊಳಗಿನ ಲಿಂಗತ್ವ ಅಲ್ಪ ಸಂಖ್ಯಾತರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/-ಗಳಿಗಿಂತ ಕಡಿಮೆ ಇರಬೇಕು.<br>**3. <u>ವೃದ್ಧಾಪ್ಯ ವೇತನ:</u>**<br>• 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ.32,000/-ಗಳಿಗಿಂತ ಕಡಿಮೆ ಇರಬೇಕು.<br>**4. <u>ಅಂಗವಿಕಲ ವೇತನ</u>**<br>• ಬಡತನ ರೇಖೆಗಿಂತ ಕೆಳಗಿರುವ ಅಂಗವಿಕಲರಿಗೆ<br>• ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ.32,000/-ಗಳಿಗಿಂತ ಕಡಿಮೆ ಇರಬೇಕು.<br>❖ **ಮೇಲ್ಕಂಡ ಎಲ್ಲಾ ಯೋಜನೆಗಳ ಪರಿಷ್ಕೃತ ವಾರ್ಷಿಕ ಆದಾಯ ಮಿತಿ ದಿನಾಂಕ: 10.02.2021 ರಿಂದ ಜಾರಿಗೆ ಬಂದಿದೆ.** |
| ಆ) ಇತ್ತೀಚೆಗೆ ಇವರುಗಳಿಗೆ ಸೂಕ್ತ ಸಮಯದಲ್ಲಿ ಮಾಶಾಸನ ನೀಡುವಲ್ಲಿ ವಿಳಂಬವಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡ ಕ್ರಮಗಳು ಯಾವುವು: | • ಸಾಮಾಜಿಕ ಭದ್ರತಾ ಫಲಾನುಭವಿಗಳಿಗೆ ಮಾಸಿಕ ಪಿಂಚಣಿ ವಿತರಣೆಯಲ್ಲಿ ಯಾವುದೇ ವಿಳಂಬವಾಗಿರುವುದು ಕಂಡುಬಂದಿರುವುದಿಲ್ಲ.ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ರತಿ ತಿಂಗಳೂ ಖಜಾನೆಯಲ್ಲಿ ಬಿಲ್ಲು ತಯಾರಿಸಿ NPCI ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ /ಅಂಚೆ ಖಾತೆಗೆ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.<br>• ಕೇಂದ್ರ ಸರ್ಕಾರದ ಸೂಚನೆಯನುಸಾರ ನೇರ ಹಣ ಸಂದಾಯ ಯೋಜನೆ ಜಾರಿಗೊಳಿಸುವಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಎಸ್ ಎಸ್ ಪಿ ಎಂಐ ಎಸ್ ಸಿ 56/2022 ದಿನಾಂಕ: 23.08.2022 ರನ್ವಯ ವಿವಿಧ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಎಲ್ಲಾ ಫಲಾನುಭವಿಗಳು ಆಧಾರ್ ಜೋಡಣೆ ಮಾಡಲು ಹಾಗೂ ಬ್ಯಾಂಕ್ / ಅಂಚೆ ಖಾತೆ ವಿವರಗಳನ್ನು ನೀಡಲು ದಿನಾಂಕ: 15.09.2022 ರವರೆಗೆ ಗಡುವು ನಿಗಧಿಪಡಿಸಲಾಗಿದ್ದು. ಈ ಕುರಿತಂತೆ ಫಲಾನುಭವಿಗಳ ಮಾಹಿತಿಗಾಗಿ ವ್ಯಾಪಕ ಪ್ರಚಾರವನ್ನು ಪತ್ರಿಕಾ ಮಾಧ್ಯಮ/ ಅಂತರ್ಜಾಲ ಮುಖಾಂತರ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ / ಸ್ಥಳೀಯ ಮಟ್ಟದಲ್ಲಿ ಮಾಡುವ ಮೂಲಕ ಈ ಪ್ರಕಿಯೆಯನ್ನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅಲ್ಲದೇ ನಿರ್ದೇಶನಾಲಯದ ವತಿಯಿಂದ ಸಹ ಈ ಕುರಿತಂತೆ ಪ್ರಮುಖ ದಿನಪತ್ರಿಕೆಗಳಲ್ಲಿ ಹಾಗೂ ನಿರ್ದೇಶನಾಲಯದ ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲಾಗಿದೆ. |

| | |
|---|---|
| | • ಮೇಲಿನ ಎಲ್ಲಾ ಕ್ರಮಗಳನ್ನು ಅನುಸರಿಸಿದ ನಂತರವೂ ಸೆಪ್ಟೆಂಬರ್ ಅಂತ್ಯಕ್ಕೆ ಆಧಾರ್ ಜೋಡಣೆಗೆ ಬಾಕಿಯಿದ್ದ 1.25 ಲಕ್ಷ ಹಾಗೂ ಇ.ಎಂ.ಓ 0.93 ಲಕ್ಷ ರಂತೆ ಒಟ್ಟು 2.17 ಲಕ್ಷ ಫಲಾನುಭವಿಗಳ ಪಿಂಚಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅಂತಹ ಪ್ರಕರಣಗಳಲ್ಲಿ ಫಲಾನುಭವಿಗಳು ತಮ್ಮ ಆಧಾರ್ ಮತ್ತು ಬ್ಯಾಂಕ್/ಅಂಚೆ ಖಾತೆ ವಿವರಗಳನ್ನು ಸಲ್ಲಿಸಿದ ನಂತರ ಸಂಬಂಧಪಟ್ಟ ತಹಶೀಲ್ದಾರರು ಪಿಂಚಣಿ ಮರುಚಾಲನೆಗೊಳಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳನ್ನು ಮರು ಚಾಲನೆಗೊಳಿಸಿದ ನಂತರ ಆ ಅವಧಿಯ ಪಿಂಚಣಿಯನ್ನು ಬಾಕಿ ರೂಪದಲ್ಲಿ ಫಲಾನುಭವಿಗಳ ಖಾತೆಗೆ ಪಾವತಿಸಲಾಗುವುದು. ಇದುವರೆವಿಗೆ 44,628 ಪ್ರಕರಣಗಳಲ್ಲಿ ಪಿಂಚಣಿ ಮರುಚಾಲನೆಗೊಳಿಸಿ ಕ್ರಮವಹಿಸಲಾಗಿರುತ್ತದೆ. ಡಿಸೆಂಬರ್ 2022 ರ ಅಂತ್ಯಕ್ಕೆ ಅಂತಿಮ ಗಡುವು ನೀಡಲಾಗಿದೆ.<br>• ಮೇಲಿನಂತೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವ ಪಿಂಚಣಿಯನ್ನು ಹೊರತುಪಡಿಸಿ ಪ್ರಸ್ತುತ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ 75.76 ಲಕ್ಷ ಫಲಾನುಭವಿಗಳಿಗೂ ಆಧಾರ್ ಜೋಡಣೆಗೊಳಿಸಿ ನೇರ ಹಣ ಸಂದಾಯ ಯೋಜನೆಗೆ ವರ್ಗಾಯಿಸಿ ಶೇ 100 ಪ್ರಗತಿ ಸಾಧಿಸಲಾಗಿರುತ್ತದೆ. |
| ಇ) ರಾಜ್ಯದಲ್ಲಿರುವ ವಿಧವೆಯರು, ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಹಿರಿಯ ನಾಗರೀಕರು ಮತ್ತು ವಿಕಲಚೇತನರಿಗೆ ಸರ್ಕಾರದಿಂದ ನೀಡುವ ಮಾಸಾಶನ ಬಗ್ಗೆ ಅರಿವು ಮೂಡಿಸುವಲ್ಲಿ ಕೊರತೆ ಉಂಟಾಗುತ್ತಿದ್ದು ಯೋಜನೆ ಸದ್ಬಳಕೆಯಾಗುತ್ತಿಲ್ಲವೆ: ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳಾವುವು? | • ಸಾಮಾಜಿಕ ಭದ್ರತಾ ಯೋಜನೆಯಡಿ ಸರ್ಕಾರದಿಂದ ದೊರೆಯುತ್ತಿರುವ ವಿವಿಧ ಪಿಂಚಣಿ ಸೌಲಭ್ಯಗಳು ಪರಿಣಾಮಕಾರಿಯಾಗಿ ಅರ್ಹ ಫಲಾನುಭವಿಗಳಿಗೆ ದೊರಕಿಸುವ ಉದ್ದೇಶದಿಂದ 2020-21 ನೇ ಸಾಲಿನಲ್ಲಿ " ಮನೆ ಬಾಗಿಲಿಗೆ ಮಾಸಾಶನ" ಎಂಬ ಅಭಿಯಾನವನ್ನು ಪ್ರಾರಂಭಿಸುವ ಮೂಲಕ ನಾಗರೀಕರ ಆದಾಯ, ವಯೋಮಿತಿ ಹಾಗೂ ಇತರೆ ಅಗತ್ಯ ದಾಖಲೆಗಳ ಆಧಾರದ ಮೇಲೆ ಸ್ವಯಂ ಪ್ರೇರಿತವಾಗಿ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ವನ್ನು ಮನೆಬಾಗಿಲಿಗೆ ತಲುಪಿಸುವ ಮುಖಾಂತರ ಸರ್ಕಾರದ ಯೋಜನೆ ಸದ್ಬಳಕೆಯಾಗುವ ನಿಟ್ಟಿನಲ್ಲಿ ಕ್ರಮವಹಿಸಲಾಗಿರುತ್ತದೆ.<br>• 2022-23 ನೇ ಸಾಲಿನಲ್ಲಿ "ಹಲೋ ಕಂದಾಯ ಸಚಿವರೇ " 72 ಗಂಟೆಗಳಲ್ಲಿ ಪಿಂಚಣಿ ಮಂಜೂರಾತಿ ಅಭಿಯಾನವನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಪಿಂಚಣಿ ಕೋರಿಕೆ ಮನವಿಗಳನ್ನು "155245" ಸಹಾಯವಾಣಿ ಮುಖಾಂತರ ಪಡೆದು ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.<br>• ಸಾಮಾಜಿಕ ಭದ್ರತಾ ಯೋಜನೆಗಳ ವಿವರಗಳಗೊಳಗೊಂಡ ಫಲಕಗಳನ್ನು ನಾಡಕಛೇರಿ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಅಳವಡಿಸಲಾಗಿದೆ. |

| | |
|---|---|
| | • ಸರ್ಕಾರದಿಂದ ಕಾಲಕಾಲಕ್ಕೆ ಅನುಷ್ಠಾನಗೊಳ್ಳುವ ಹಾಗೂ ಅನುಷ್ಠಾನದಲ್ಲಿರುವ ಎಲ್ಲಾ ಯೋಜನೆಗಳ ಮಾಹಿತಿ ಹಾಗೂ ಯೋಜನೆಗಳ ಅನುಷ್ಠಾನದಲ್ಲಿನ ಹೊಸ ವಿಧಾನಗಳ ಕುರಿತಂತೆ ಸಹ ದಿನಪತ್ರಿಕೆಗಳಲ್ಲಿ ದೂರದರ್ಶನಗಳಲ್ಲಿ ಹಾಗೂ ರೇಡಿಯೋ ಜಾಹೀರಾತು ನೀಡುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮವಹಿಸಲಾಗಿರುತ್ತದೆ.<br>• ಸಾಮಾಜಿಕ ಭದ್ರತೆ ಪಿಂಚಣಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ಪ್ರತೀ ತಿಂಗಳು ಹೋಬಳಿ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಪಿಂಚಣಿ ಅಧಾಲತ್ ಕಾರ್ಯಕ್ರಮ ನಡೆಯುತ್ತಿದ್ದು ನವೆಂಬರ್ 2022 ರ ಅಂತ್ಯಕ್ಕೆ ಒಟ್ಟು 500 ಪಿಂಚಣಿ ಅಧಾಲತ್ ಕಾರ್ಯಕ್ರಮಗಳು ನಡೆದಿದ್ದು, ಒಟ್ಟು 15608 ಅರ್ಜಿಗಳು ಸ್ವೀಕೃತವಾಗಿದ್ದು ಈ ಪೈಕಿ 15458 ಅರ್ಜಿಗಳು ವಿಲೇವಾರಿಯಾಗಿರುತ್ತವೆ ಹಾಗೂ ಇದಲ್ಲದೇ ಪ್ರತೀ ತಿಂಗಳ ಮೂರನೇ ಶನಿವಾರದಂದು ನಡೆಯುವ " ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ" ಕಾರ್ಯಕ್ರಮದಲ್ಲಿಯು ಸಹ ಪಿಂಚಣಿ ಮಂಜೂರಾತಿಯನ್ನು ಕೈಗೊಳ್ಳುವುದರೊಂದಿಗೆ ಪಿಂಚಣಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಹ ಇತ್ಯರ್ಥಪಡಿಸಲಾಗುತ್ತಿದೆ. |

**ಸಂಖ್ಯೆ: DSSP-LAQ- 32 /2022**

**(ಆರ್ ಅಶೋಕ)**

**ಕಂದಾಯ ಸಚಿವರು**